**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ವಿ. ತಿಪ್ಪೇಸ್ವಾಮಿ, ಶ್ರೀ ಟಿ.ಎ. ಶರವಣ ಹಾಗೂ ಡಾ:ಸೂರಜ್ ರೇವಣ್ಣ ನಿಯಮ 72ರ ಮೇರೆಗೆ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

ಸೂಚನೆ:

**"ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಮಾನ್ಯ ಲೋಕಸಭಾ ಸದಸ್ಯರು ಸ್ಥಳೀಯ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರ ಗಮನಕ್ಕೆ ತರದೇ ತಮ್ಮ ಪತ್ರಗಳ ಮೂಲಕ ಜನಸಂಪರ್ಕ ಸಭೆ ಹಾಗೂ ಇನ್ನಿತರೆ ಸಭೆಗಳನ್ನು ಏರ್ಪಡಿಸುವ ಮೂಲಕ ಸ್ಥಳೀಯ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರ ಹಕ್ಕನ್ನು ಮೊಟಕುಗೊಳಿಸುತ್ತಿರುವ ಬಗ್ಗೆ ಹಾಗೂ ಸಂಖ್ಯೆ: ಡಿಪಿಎಆರ್ 113 ಎಎಆರ್ 85 ದಿನಾಂಕ:06.12.1985ರ ಸುತ್ತೋಲೆಯ ವಿರುದ್ಧವಾಗಿ ಸಭೆ ಸಮಾರಂಭಗಳನ್ನು ಏರ್ಪಡಿಸುತ್ತಿರುವುದರಿಂದ ಸಭೆಗಳಿಗೆ ಜಿಲ್ಲಾ ಆಡಳಿತದಿಂದ ಸ್ಪಷ್ಟ ನಿರ್ದೇಶನ ಇಲ್ಲದಿದ್ದರೂ ಸಹ ಸ್ಥಳೀಯ ಅಧಿಕಾರಿಗಳು ಲೋಕಸಭಾ ಸದಸ್ಯರು ಏರ್ಪಡಿಸುವ ಸಭೆಗಳಲ್ಲಿ ಹಾಜರಾಗುವ ಮೂಲಕ ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡುತ್ತಿರುವ ಕುರಿತು"**

**ಉತ್ತರ:**

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಾಮನಗರ, ಬೆಂಗಳೂರು ನಗರ ಹಾಗೂ ತುಮಕೂರು ಜಿಲ್ಲಾಧಿಕಾರಿಗಳು ನೀಡಿರುವ ಮಾಹಿತಿಯನುಸಾರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಡಿಪಿಎಆರ್ 113 ಎಎಆರ್ 85 ದಿನಾಂಕ:06.12.1985ರಲ್ಲಿರುವ ಸೂಚನೆಗಳು ಉಲ್ಲಂಘನೆ ಆಗುವ ಯಾವುದೇ ಜಿಲ್ಲಾ ಸಮೀಕ್ಷಣಾ ಸಭೆಗಳನ್ನು ನಡೆಸಿರುವುದಿಲ್ಲ ಹಾಗೂ ಮಾನ್ಯ ಸಂಸದರು ತಮ್ಮ ವತಿಯಿಂದಲೇ ಜನಸಂಪರ್ಕ ಸಭೆ ನಡೆಸಿರುತ್ತಾರೆ. ಈ ಜನಸಂಪರ್ಕ ಸಭೆಯಲ್ಲಿ ಭಾಗವಹಿಸುವಂತೆ ಜಿಲ್ಲಾಧಿಕಾರಿಗಳು, ಅಧಿಕಾರಿಗಳಿಗೆ ಯಾವುದೇ ಸೂಚನೆಯನ್ನು ನೀಡಿರುವುದಿಲ್ಲ. ಸರ್ಕಾರವು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸ್ಪಷ್ಟ ನಿರ್ದೇಶನಗಳನ್ನು ನೀಡಿದ್ದು, ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 34 ಹೆಚ್‌ಪಿಎ 2018(1) ದಿನಾಂಕ:16.04.2019 ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 05 ಹೆಚ್‌ಪಿಎ 2018 ದಿನಾಂಕ:30.04.2019ರಲ್ಲಿ ಉಲ್ಲೇಖಾರ್ಹವಾಗಿರುತ್ತದೆ.

ಸರ್ಕಾರವು ಇತ್ತೀಚೆಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೂ/ಸರ್ಕಾರದ ಕಾರ್ಯದರ್ಶಿಗಳಿಗೂ/ಇಲಾಖಾ ಮುಖ್ಯಸ್ಥರಿಗೂ ಸಭೆ ಸಮಾರಂಭಗಳಿಗೆ ಹಾಗೂ ಶಿಷ್ಟಾಚಾರ ವಿಷಯಗಳಿಗೆ ಸಂಬಂಧಿಸಿದಂತೆ ಸುತ್ತೋಲೆ ಸಿಆಸುಇ 28 ಹೆಚ್‌ಪಿಎ 2023, ದಿನಾಂಕ:20.09.2023ರಲ್ಲಿ ಸ್ಪಷ್ಟ ಸೂಚನೆಯನ್ನು ನೀಡಿದ್ದು, ಯಾವುದಾದರೂ ನಿರ್ದಿಷ್ಟ ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳು ಇದ್ದಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

(ಸಿದ್ದರಾಮಯ್ಯ)
ಮುಖ್ಯಮಂತ್ರಿ

ಸಂಖ್ಯೆ:ಸಿಆಸುಇ 55 ಹೆಚ್‌ಪಿಎ 2023